# ಅಣಕು ಕಲಾವಿದ ಡ್ರೊಂಗೊ

ಇವು ಡೈಕ್ರುರಿಡೇ ಕುಟುಂಬಕ್ಕೆ ಸೇರಿದ್ದೂ, ಡೈಕ್ರುರಸ್ ಮ್ಯಾಕ್ರೊಸೆರ್ಕಸ್ ವೈಜ್ಞಾನಿಕ ನಾಮಕರಣವಾಗಿದೆ. ಇವು ಭಾರತ, ಚೀನ ಮತ್ತು ಶ್ರೀಲಂಕಾದಲ್ಲಿ ಕಂಡುಬರುತ್ತವೆ.

ಡ್ರೊಂಗೊ ಚಿಕ್ಕ ಕಾಲುಗಳ, ಕಪ್ಪು ಬಣ್ಣದ ಪಕ್ಷಿಗಳು. ಕವಲಾದ ಬಾಲವಿದೆ. ಕೆಲವಕ್ಕೆ ನೇರವಾದ ಬಾಲದ ಅಲಂಕಾರವಿದೆ. ಇವು ಕೀಟಾಹಾರಿಗಳು. ಸಣ್ಣ ಗಾತ್ರದ ಪಕ್ಷಿಗಳಾಗಿದ್ದರೂ ಭಯವಿಲ್ಲದ, ಆಕ್ರಮಣಕಾರಿ ಗುಣವನ್ನು ಪ್ರದರ್ಶಿಸುತ್ತವೆ. ಡ್ರೊಂಗೊ ಅದ್ಭುತ ಅಣಕು ಕಲಾವಿದನಂತೆ ವರ್ತಿಸುತ್ತವೆ. ತಮ್ಮ ಸುತ್ತಲಿನ ಪರಿಸರದ ಇತರೆ ಕೆಲವು ಹಕ್ಕಿ– ಪ್ರಾಣಿಗಳ ಕೂಗನ್ನು ಅನುಕರಿಸುವ ಅದ್ಭುತ ಪ್ರತಿಭೆ ಹೊಂದಿವೆ. ಇವುಗಳ ಎಚ್ಚರಿಕೆಯ ಕೂಗಿಗೆ ಹಲವಾರು ಪ್ರಾಣಿಗಳು ಮತ್ತು ಪಕ್ಷಿಗಳೂ ಕೂಡ ಪ್ರತಿಕ್ರಿಯೆ ನೀಡುತ್ತವೆ.

ಕಹಾರಿ ಮರುಭೂಮಿಯಲ್ಲಿ ಕವಲು ಬಾಲದ ಡ್ರೊಂಗೊಗಳು ಆಹಾರದ ಲಭ್ಯತೆಯನ್ನು ಹೀಗೆಯೇ ಬಿತ್ತರಿಸುತ್ತವೆ. ಅವು ತಮ್ಮ ಧ್ವನಿಯಲ್ಲೇ ಎಚ್ಚರಿಕೆಯ ಕೂಗನ್ನು ನೀಡುವುದಲ್ಲದೇ, ಬೇರೆ ಪ್ರಭೇದಗಳ ಧ್ವನಿಯನ್ನೂ ಅನುಕರಣೆ ಮಾಡುತ್ತವೆ. ವೈರಿ ಯಾವ ಕೂಗಿಗೆ ಪ್ರತಿಕ್ರಿಯೆ ನೀಡುತ್ತವೆಯೋ ಅದನ್ನು ಬಳಸುತ್ತವೆ. ಒಂದು ಧ್ವನಿ ಉಪಯುಕ್ತವಾಗದಿದ್ದರೆ ಬೇರೆ ಧ್ವನಿಯನ್ನು ಪ್ರಕಟಿಸುತ್ತವೆ. ಹೀಗೆ 51 ಧ್ವನಿಗಳನ್ನು ಅನುಕರಣೆ ಮಾಡಬಲ್ಲದು.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು





# ಬೆಟ್ಟದ ಬಂಡೆಯಲ್ಲಿ ನಂದಿ

ಪ್ರಕೃತಿಯ ಕಣ ಕಣದಲ್ಲೂ ವೈವಿಧ್ಯಮಯ ವಿಸ್ಮಯಗಳು ಗೋಚರಿಸುತ್ತವೆ ಅದು ಅವರವರ ಅಂತರಂಗದ ದೃಷ್ಟಿಯಲ್ಲಿ ತಾಕಿದಂತೆ ಗಂಗಾವತಿಯಿಂದ ನಾಲ್ಕೈದು ಕಿ.ಮೀ. ಅಂತರದಲ್ಲಿರುವ ಸಿದ್ದಿಕೇರಿ ಬಳಿ ವಾಣಭದ್ರೇಶ್ವರ ದೇವಾಲಯದ ಪಕ್ಕ ಈಶ್ವರ ದೇವಾಲಯದ ಎದುರಿನ ಕಲ್ಲು ಬಂಡಿಯು ನೋಡುಗರಿಗೆ ಮಲಗಿದ ನಂದಿಯಂತೆ ಕಾಣುತ್ತದೆ. ಇದಕ್ಕೆ ಅನಾಮಿಕ ಕಲೆಗಾರನ ಕುಂಚದ ಸ್ಪರ್ಷದಿಂದ ಈಗ ಕಲ್ಲಿನಲ್ಲಿ ಕೆತ್ತಿದ ನಂದಿಯ ವಿಗ್ರಹದಂತೆ ಕಂಡುಬರುತ್ತದೆ ಪಕ್ಕದಿಂದ ನಿಂತು ನೋಡಿದರೆ ಒಂದೇ ಭಾಗದ ನಂದಿ ರೂಪ ಗೊಚರವಾಗುತ್ತದೆ ಮುಂಭಾಗದಿಂದ ನಿಂತು ನೋಡಿದರೆ ಎರಡು ಮೈ ಗೊಚರವಾಗಿ ವಿಶ್ರಾಂತಿಯಲ್ಲಿರುವಂತೆ ಕಂಡುಬರುತ್ತದೆ. ಇಂತಹ ಕಲ್ಲು ಬಂಡೆಗೆ ತನ್ನ ಕಲ್ಪನೆಯಲ್ಲಿ ಜೀವ ತುಂಬಿ ನೋಡುಗರ ಮನಸನ್ನು ಅಯಸ್ಕಾಂತದಂತೆ ಸೆಳೆದ ಕಲಾವಿದನಿಗೆ ನಮ್ಮ ನಮನ ಕಲೆ ಎಲ್ಲರನ್ನೂ ಕೈಬೀಸಿ ಕರೆಯುತ್ತದೆ ಆದರೆ ಕೆಲವರನ್ನು ಮಾತ್ರ ಆಯ್ಕೆಮಾಡಿಕೊಳ್ಳುತ್ತದೆ ಎಂಬ ಮಾತು ಅಕ್ಷರಶಃ ಸತ್ಯ, ಕಲೆಗಾರ ಪ್ರತಿ ನಿರ್ಜೀವ ವಸ್ತುಗಳಿಗೂ ಕುಂಚ ಮತ್ತು ಬಣ್ಣದಿಂದ ಜೀವತುಂಬವ ಮಾಂತ್ರಿಕ.

—ಮೈಲಾರಪ್ಪ ಬೂದಿಹಾಳ ಮುಗಿಲ ಹಕ್ಕಿ

# ಬಾಟ್ಲಿಯೊಳಗಿಳಿದ ಹಡಗು

ಅಮೆರಿಕದ ಬೋಸ್ಟನ್ ನಗರದಲ್ಲಿ **USS CONSTITUTION** ಎಂಬ ಹೆಸರಿನ ನೌಕಾ ಪಡೆಯ ಹಡಗಿದೆ. 1797ರಲ್ಲಿ ನಿರ್ಮಿಸಲಾಗಿದೆ. ಇಂದಿಗೂ ತೇಲುತ್ತಿರುವ ವಿಶ್ವದ ಅತ್ಯಂತ ಹಳೆಯ ನಿಯೋಜಿತ ನೌಕಾ ಪಡೆಯ ಹಡಗು ಇದು. 1812ರಲ್ಲಿ ಯುನೈಟೆಡ್ ಕಿಂಗ್ ಡಮ್ ವಿರುದ್ಧ ನಡೆದ ಯುದ್ಧದಲ್ಲಿ ಪಾಲ್ಗೊಂಡ ಕೀರ್ತಿ ಈ ಹಡಗಿನದ್ದಾಗಿದೆ. ಹಡಗಿನ ಪಕ್ಕದಲ್ಲಿರುವ **USS CONSTITUTION MUSEUM**ನಲ್ಲಿ ಹಡಗಿನ ಇತಿಹಾಸಕ್ಕೆ ಸಂಬಂಧಿಸಿದ ದಾಖಲೆಗಳು, ಸಂಗ್ರಹಣೆಗಳು ಹಾಗೂ ಸಂವಾದಾತ್ಮಕ ಪ್ರದರ್ಶನಗಳ ಮೂಲಕ ಹಡಗಿನ ಇತಿಹಾಸವನ್ನು ವಿವರಿಸಲಾಗಿದೆ.

ನನ್ನ ಮಗ ಬೋಸ್ಟನ್‌ನಲ್ಲಿದ್ದಾಗ, **USS CONSTITUTION MUSEUM**ಗೆ ಬೇಟಿ ನೀಡಿದ ನೆನಪಿಗಾಗಿ ಖರೀದಿಸಿದ ‘ಬಾಟ್ಲಿಯೊಳಗೆ ಹಡಗಿನ ಕಲಾಕೃತಿ’ ನಮ್ಮ ಮನೆಯ ಶೋಕೇಸ್ ಅಲಂಕರಿಸಿದೆ.

—ಜಿ. ಪದ್ಮಾ ಕಾವೂರು, ಸಂಡೂರು

